**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ನಂಜನಗೂಡು**

**ಸಿಸಿ ಸಂಖ್ಯೆ : 505/2018**

ಫಿರ್ಯಾದುದಾರರು : ಗ್ರಾಮಾಂತರ ಪೊಲೀಸ್ ಠಾಣೆ, ನಂಜನಗೂಡು.

**ವಿರುದ್ಧ**

ಆರೋಪಿತರು :

1) ಸ್ವಾಮಿ ಬಿನ್ ಕರಿಯಪ್ಪ,
ವಯಸ್ಸು ಸುಮಾರು 44 ವರ್ಷ,

2) ಕರಿಯಪ್ಪ ಬಿನ್ ಮೃತ ಚಿಕ್ಕೇಗೌಡ,
**ಮರಣ ಹೊಂದಿರುತ್ತಾರೆ.**

3) ಮರಿನಂಜು ಬಿನ್ ಕರಿಯಪ್ಪ,
ವಯಸ್ಸು ಸುಮಾರು 50 ವರ್ಷ,

4) ಚಿಕ್ಕ ಬಿನ್ ಕರಿಯಪ್ಪ,
ವಯಸ್ಸು ಸುಮಾರು 32 ವರ್ಷ,

5) ಮಹಾದೇವ ಬಿನ್ ಕರಿಯಪ್ಪ,
ವಯಸ್ಸು ಸುಮಾರು 40 ವರ್ಷ,

6) ಶ್ರೀಕಂಠ ಬಿನ್ ಕರಿಯಪ್ಪ,
ವಯಸ್ಸು ಸುಮಾರು 30 ವರ್ಷ,

7) ತಾಯಮ್ಮ ಕೋಂ ಕರಿಯಪ್ಪ,
ವಯಸ್ಸು ಸುಮಾರು 65 ವರ್ಷ,

ಎಲ್ಲರೂ ವಾಸಃ ಕೆಂಪಿಸಿದ್ದನಹುಂಡಿ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

:: **ದೋಷಾರೋಪಣೆ** ::

*ಶ್ರೀ ರಘುರಾಮ ಎನ್. ಎಸ್.,* ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ದಿನಾಂಕ 23.11.2017 ರಂದು ಸಂಜೆ 6.00 ಗಂಟೆ ಸಮಯದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕೆಂಪಿಸಿದ್ದನಹುಂಡಿ ಗ್ರಾಮದ ಚಾಸಾ-1 ರವರ ಬಾಬ್ತು ಮನೆಯ ಹಿತ್ತಲಿಗೆ ಸೇರಿದಂತೆ 1 ನೇ ಆರೋಪಿತರಾದ ತಾವು ಶೌಚಾಲಯವನ್ನು ಕಟ್ಟುತ್ತಿದ್ದನ್ನು ಚಾಸಾ-1 ಮತ್ತು 2 ರವರು ನಮ್ಮ ಜಾಗದಲ್ಲಿ ಏಕೆ ಶೌಚಾಲಯ ಕಟ್ಟುತ್ತಿದ್ದೀರಿ ಎಂದು ಕೇಳಿದ್ದಕ್ಕೆ, 1, 3 ರಿಂದ 7 ನೇ ಆರೋಪಿತರಾದ ತಾವುಗಳು ಮೃತ 2 ನೇ ಆರೋಪಿತರೊಂದಿಗೆ ಸೇರಿಕೊಂಡು ಅಕ್ರಮ ಗುಂಪನ್ನು ಕಟ್ಟಿಕೊಂಡ್ಡಿರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ 1, 3 ರಿಂದ 7 ನೇ ಆರೋಪಿತರಾದ ತಾವುಗಳು ಮೃತ 2 ನೇ ಆರೋಪಿತರೊಂದಿಗೆ ಸೇರಿಕೊಂಡು ಅಕ್ರಮ ಗುಂಪನ್ನು ಕಟ್ಟಿಕೊಂಡು ದೊಂಬಿಯನ್ನುಂಟು ಮಾಡಿದ್ದರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ 1, 3 ರಿಂದ 7 ನೇ ಆರೋಪಿತರಾದ ತಾವುಗಳು ಮೃತ 2 ನೇ ಆರೋಪಿತರೊಂದಿಗೆ ಸೇರಿಕೊಂಡು ಅಕ್ರಮ ಗುಂಪನ್ನು ಕಟ್ಟಿಕೊಂಡು ಕೈಯಲ್ಲಿ ಅಪಾಯಕಾರಕ ಸಾಧನಗಳನ್ನು ಹಿಡಿದುಕೊಂಡು ದೊಂಬಿಯನ್ನುಂಟು ಮಾಡಿದ್ದರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 148

ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ನಾಲ್ಕನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ 1, 3 ರಿಂದ 7 ನೇ ಆರೋಪಿತರಾದ ತಾವುಗಳು ಮೃತ 2 ನೇ ಆರೋಪಿತರೊಂದಿಗೆ ಸೇರಿಕೊಂಡು ಚಾಸಾ-1 ರವರ ವಾಸದ ಮನೆಗೆ ಅಕ್ರಮ ಪ್ರವೇಶ ಮಾಡಿದ್ದರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 448 ಸಹವಾಚಕ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಐದನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ 1, 3 ರಿಂದ 7 ನೇ ಆರೋಪಿತರಾದ ತಾವುಗಳು ಮೃತ 2 ನೇ ಆರೋಪಿತರೊಂದಿಗೆ ಸೇರಿಕೊಂಡು ಚಾಸಾ-1 ರವರಿಗೆ ನಮ್ಮ ಜಾಗದಲ್ಲಿ ನಾವು ಶೌಚಾಲಯ ಕಟ್ಟುತ್ತೇವೆ ನೀವ್ಯಾರು ಕೇಳಲು ಎಂದು ಗಲಾಟೆ ಮಾಡಿ, 1, 3 ರಿಂದ 7 ನೇ  ಆರೋಪಿತರಾದ ತಾವುಗಳೆಲ್ಲರೂ ಚಾಸಾ-1 ಮತ್ತು 2 ರವರಿಗೆ ಕೈಗಳಿಂದ ಮೈ ಕೈಗೆ ಹೊಡೆದು ನೋವುಂಟು ಮಾಡಿದ್ದರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಆರನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಚಾಸಾ-1 ರವರನ್ನು ಬಿಡಿಸಿಕೊಳ್ಳಲು ಹೋದ ಚಾಸಾ-2 ರವರಿಗೆ 1 ನೇ  ಆರೋಪಿತರಾದ ತಾವು ದೊಣ್ಣೆಯಿಂದ ಚಾಸಾ-2 ರವರ ಬಾಯಿಯ ತುಟ್ಟಿಯ ಮೇಲ್ಭಾಗಕ್ಕೆ ಸ್ವಇಚ್ಛೆಯಿಂದ ಹೊಡೆದು ನೋವುಂಟು ಮಾಡಿದ್ದರಿಂದ ತಾವು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಏಳನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ 1, 3 ರಿಂದ 7 ನೇ ಆರೋಪಿತರಾದ ತಾವುಗಳು ಮೃತ 2 ನೇ ಆರೋಪಿತರೊಂದಿಗೆ ಸೇರಿಕೊಂಡು ಚಾಸಾ-1 ರವರ ವಾಸದ ಮನೆಗೆ ಕಲ್ಲುಗಳನ್ನು ಹೊಡೆದು ಚಾಸಾ-1 ರವರ ಮನಯ ಕಲ್ನಾರ್ ಶೀಟ್

ಒಡೆದು ಹಾಕಿ ಚಾಸಾ-1 ರವರಿಗೆ ರೂ.800/- ನಷ್ಟವನ್ನುಂಟು ಮಾಡಿದ್ದರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 427 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎಂಟನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ 1, 3 ರಿಂದ 7 ನೇ ಆರೋಪಿತರಾದ ತಾವುಗಳು ಮೃತ 2 ನೇ ಆರೋಪಿತರೊಂದಿಗೆ ಸೇರಿಕೊಂಡು ಚಾಸಾ-1 ಮತ್ತು ಚಾಸಾ-2 ರವರಿಗೆ ನಿಮ್ಮನ್ನು ಮುಗಿಸುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಆದ ಕಾರಣ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ನಿಮ್ಮ ಮೇಲಿನ ಆರೋಪಣೆಯ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

(ರಘುರಾಮ ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ನಂಜನಗೂಡು.